**OS No. 78/2023**
**ಡಿ.ಡಬ್ಲ್ಯೂಃ 1**

**ದಿನಾಂಕ 17-12-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿಗೆ ಕನ್ನಡ ಮಾತನಾಡಲು ಬರದ ಕಾರಣ ತೆಲುಗು ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸಲು ಶ್ರೀ ಎಮ್, ಎಮ್. ಜಿ ವಕೀಲರನ್ನು ಆಯ್ಕೆ ಮಾಡಲಾಯಿತು.**

**ಪಾಟೀ ಸವಾಲು ವಾದಿಯ ಪರ: ಶ್ರೀ ಎಸ್, ಕೆ ವಕೀಲರಿಂದಃ**

1. ನನ್ನ ಅಣ್ಣ ನನ್ನ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತಾನೆ. ಸದರಿ ದಾವೆಯನ್ನು ಜಮೀನ ಸರ್ವೆ ನಂಬರ 182 ರ ಸಲುವಾಗಿ ಸಲ್ಲಿಸಿರುತ್ತಾರೆ. ಸದರಿ ಒಂದೇ ಜಮೀನಿನ ಸಲುವಾಗಿ ದಾವೆಯನ್ನು ಸಲ್ಲಿಸಿರುತ್ತಾನೆ. ವಾದಿಯು ಒಟ್ಟು 5 ಜಮೀನು ಸಲುವಾಗಿ ದಾವೆಯನ್ನು ಸಲ್ಲಿಸಿರುತ್ತಾನೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ. ನನಗೆ ಪ್ರತಿವಾದ ಪತ್ರ ಮತ್ತು ಮುಖ್ಯ ವಿಚಾರಣೆಯಲ್ಲಿ ಬರೆದ ವಿಷಯಗಳ ಬಗ್ಗೆ ಮಾಹಿತಿ ಇದೆ. ಸದರಿ ಮನೆಗಳ ಸಲುವಾಗಿ ಕೂಡ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳು ಹಿರಿಯರ ಆಸ್ತಿ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮುಂಬೈಯಲ್ಲಿರುವ ಆಸ್ತಿಗಳು ವಾದಿಗೆ ಹೋಗಿರುತ್ತವೆ ಮತ್ತು ದಾವಾ ಆಸ್ತಿಗಳು ನನ್ನ ಪಾಲಿಗೆ ಬಂದಿರುತ್ತವೆ ಎಂದು ನುಡಿಯುತ್ತಾರೆ. ಮುಂಬೈಯಲ್ಲಿ 3 ಮನೆಗಳು ಇದ್ದು ನಾನು ಮತ್ತು ವಾದಿ ಖರೀದಿ ಮಾಡಿರುತ್ತೇವೆ. ಮುಂಬೈಯಲ್ಲಿರುವ ಮನೆಗಳ ನಂಬರ ನನಗೆ ನೆನಪಿಲ್ಲ. ಮುಂಬೈಯಲ್ಲಿರುವ ಆಸ್ತಿಗಳು ವಾದಿಯ ಹೆಸರಿನಲ್ಲಿ ಇದ್ದು ಅದರ ದಾಖಲಾತಿಗಳನ್ನು ಹಾಕಿರುವುದಿಲ್ಲ. ವಾದಿಯ ಹೆಸರಿನಲ್ಲಿ ಮುಂಬೈಯಲ್ಲಿ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮುಂಬೈಯಲ್ಲಿ ಆಸ್ತಿ ಇದ್ದರೆ ದಾಖಲಾತಿಗಳನ್ನು ಸಲ್ಲಿಸುತ್ತಿದ್ದೆ ಎಂದರೆ ಸಾಕ್ಷಿಯು ದಾಖಲಾತಿಗಳು ಇವೆ ಎಂದು ನುಡಿಯುತ್ತಾರೆ. ಸದರಿ ಯಾವುದೇ ದಾಖಲಾತಿ ಇಲ್ಲದೆ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗಳು ನನಗೆ ಮತ್ತು ಮುಂಬೈ ಆಸ್ತಿಗಳು ವಾದಿಗೆ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಾಲು ವಾಟನಿಯಾಗಿದ್ದರ ಬಗ್ಗೆ ಯಾವುದಾದರೂ ದಾಖಲಾತಿ ಇದೆಯಾ**?** ಎಂದರೆ ಸಾಕ್ಷಿಯು ವಾದಿಯು ತಹಶಿಲ್ದಾರ ಕಚೇರಿಗೆ ಬಂದು ಮಾಡಿಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ.

ವಾದಿಯು ತಹಶೀಲ್ದಾರ ಕಚೇರಿಗೆ ಬಂದು ಮಾಡಿಕೊಟ್ಟಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2. ಸುಮಾರು 25 ವರ್ಷಗಳ ಹಿಂದೆ ಪಾಲು ವಾಟನಿಯಾಗಿರುತ್ತದೆ. ಸದರಿ ಪಾಲು ವಾಟನಿ ಸಮಯದಲ್ಲಿ ಮಹಾದೇವಪ್ಪ ನಿರೆಟ್ಟಿ, ಅಬ್ದುಲ್ ಸಾಬ, ಸಲೀಂ ಖಾಜಾ ಇವರು ಹಾಜರು ಇದ್ದರು. ಸದರಿ ಪಾಲು ವಾಟನಿಯ ಮಾತು-ಕತೆ ಅಜಲಾಪೂರ ಗ್ರಾಮದಲ್ಲಿ ಆಗಿ, ಯಾದಗಿರಿಯಲ್ಲಿ ಪಾಲು ವಾಟನಿಯಾಗಿರುತ್ತದೆ. ಸದರಿ ಪಾಲು ವಾಟನಿ ಮೌಖಿಕವಾಗಿ ಆಗಿರುತ್ತದೆ. ಸದರಿ ಪಾಲು ವಾಟನಿ ಮಾಡುವಾಗ ಈ ಮೇಲಿನ ಜನರು ಹಾಜರಿದ್ದರು ಎಂದು ನನ್ನ ಮುಖ್ಯ ವಿಚಾರಣೆ ಮತ್ತು ಪ್ರತಿವಾದ ಪತ್ರದಲ್ಲಿ ಬರೆಸಿರುತ್ತೇನೆ. ನಾನು ಆ ರೀತಿ ಬರೆಸದಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಪಾಲು ವಾಟನಿಯಾದ ನಂತರ ವಾದಿಯ ಸಹಿ ಪಡೆದುಕೊಂಡಿರುವುದಿಲ್ಲ. ಯಾವುದೇ ಪಾಲು ವಾಟನಿಯಾಗದೇ ಇದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಾದಿಯು ಯಾದಗಿರಿ ತಹಶೀಲ್ದಾರ ಕಚೇರಿಯಲ್ಲಿ ಒಪ್ಪಿ ಸಹಿ ಮಾಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಪಾಲು ಕೊಡಬೇಕಾಗುತ್ತದೆ ಆದ್ದರಿಂದ ವಾಟನಿಯಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಮ್ಮ ಕುಟುಂಬದ ಮೂಲ ಪುರುಷನ ಹೆಸರು ಭೀಮಾ ತಂದೆ ನರಸಾ ಎಂದರೆ ಸರಿ. ಭೀಮಾ ಇವರಿಗೆ ಬುಡ್ಡಪ್ಪ ಮಗ ಎಂದರೆ ಸರಿ. ಬುಡ್ಡಪ್ಪ ಇವರ ಹೆಂಡತಿಯ ಹೆಸರು ತಿಮ್ಮಕ್ಕ ಎಂದರೆ ಸರಿ. ಸದರಿ ಜಮೀನ ಸರ್ವೆ ನಂಬರ 181, 182, 183, 215, 216 ಬುಡ್ಡಪ್ಪ ಮತ್ತು ತಿಮ್ಮಕ್ಕ ಇವರ ಆಸ್ತಿಗಳು ಎಂದರೆ ಸರಿ. ಬುಡ್ಡಪ್ಪ ಮತ್ತು ತಿಮ್ಮಕ್ಕ ಇವರಿಗೆ ನರಸಪ್ಪ, ದೊಡ್ಡ ಹಣಮಂತ, ನಡಪಿ ಹಣಮಂತ, ಆಶಪ್ಪ, ಸಣ್ಣ ಹಣಮಂತ ಇವರು ಮಕ್ಕಳು ಎಂದರೆ ಸರಿ. ಸದರಿ ಬುಡ್ಡಪ್ಪ ಮತ್ತು ತಿಮ್ಮಕ್ಕ ಇವರ ಮಕ್ಕಳು ಜಮೀನ ಸರ್ವೆ ನಂಬರ 181, 182, 183, 215, 216 ರಲ್ಲಿ ಪಾಲು ವಾಟನಿಯಾಗಿರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗಳು ನನ್ನ ತಂದೆಯ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳಿಗೆ ನನ್ನ ತಂದೆಯ ಸಹೋದರರಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿ. ನನ್ನ ತಾಯಿಯ ಹೆಸರು ಶಂಕ್ರಮ್ಮ ಎಂದರೆ ಸರಿ. ವಾದಿ ನನ್ನ ಅಣ್ಣ ಎಂದರೆ ಸರಿ. ಜಮೀನ ಸರ್ವೆ ನಂಬರ 182, 183, 215 ರಲ್ಲಿ ನನ್ನ ತಂದೆಯ ಪಾಲಿಗೆ ಬಂದ

ತಲಾ 3 ಗುಂಟೆ ಜಮೀನು ಸಣ್ಣ ಹಣಮಂತ ಇವರ ಹೆಸರಿಗೆ ಆದ ನಂತರ ನಾನು ನೇರವಾಗಿ ನನ್ನ ನನ್ನ ಹೆಸರಿಗೆ ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ವಾದಿ ಇದ್ದಾಗಲೇ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ವಾದಿ ಮಾಡಿಕೊಟ್ಟಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮುಂಬೈಯಲ್ಲಿ ವಾಸವಾಗಿರುತ್ತಾನೆ ಎಂದರೆ ಸರಿ. ನನ್ನ ತಂದೆ ಮರಣ ಹೊಂದಿ ಸುಮಾರು 11 ರಿಂದ 12 ವರ್ಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮರಣ ಹೊಂದಿ ಸುಮಾರು 6-7 ವರ್ಷಗಳು ಆಗಿರುತ್ತವೆ ಎಂದು ನುಡಿಯುತ್ತಾರೆ. ಸನಃ 2004-2005 ರಲ್ಲಿ ದಾವಾ ಆಸ್ತಿಗಳನ್ನು ನಾನೇ ನೇರವಾಗಿ ವರ್ಗಾವಣೆ ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ವಾದಿ, ಅತ್ತಿಗೆ ಅವರೇ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ ಮರಣ ಹೊಂದುವವರೆಗೆ ನಾವೆಲ್ಲರೂ ಒಟ್ಟಾಗಿ ಸಾಗುವಳಿ ಮಾಡುತ್ತಿದ್ದೇವು ಎಂದರೆ ಸರಿ. ವಾದಿಗೆ ಬೆಳೆಗಳ ಪಾಲು ಕೊಡುತ್ತಿದ್ದಿರಾ? ಎಂದರೆ ಸಾಕ್ಷಿಯು ವಾದಿಯು ಕೇಳಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಯು ಬೆಳೆಗಳ ಪಾಲು ತೆಗೆದುಕೊಂಡು ಹೋದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿ ಮರಣ ಹೊಂದಿ ಸುಮಾರು 3 ರಿಂದ 4 ವರ್ಷಗಳು ಆಗಿರುತ್ತವೆ ಎಂದರೆ ಸಾಕ್ಷಿಯು ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ನನ್ನ ತಾಯಿ ಮರಣ ಹೊಂದಿದ ನಂತರ ನಾನು ದಾವಾ ಆಸ್ತಿಯನ್ನು ಮಾರಾಟ ಮಾಡಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಾನು ವಾದಿಯ ಮಾತು ಕೇಳಿರುವುದಿಲ್ಲ ಆದ್ದರಿಂದ ಈ ದಾವೆಯನ್ನು ಸಲ್ಲಿಸಿರುತ್ತಾನೆ ಎಂದರೆ ಸರಿಯಲ್ಲ.

4. ಸದರಿ ದಾವಾ ಆಸ್ತಿಯಲ್ಲಿ ವಾದಿಗೆ ಹಕ್ಕು ಇದ್ದು, ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಜಮೀನ ಸರ್ವೆ ನಂಬರ 181 ಕ್ಷೇತ್ರ 1 ಎಕರೆ 38 ಗುಂಟೆ ಜಮಿನಿನ ಪೂರ್ವಕ್ಕೆ ಸಿದ್ದಪ್ಪ ಇವರ ಜಮೀನು, ಪಶ್ಚಿಮಕ್ಕೆ ಶಕುಂತಲಮ್ಮ ಇವಳ ಜಮೀನು, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ಆಶಪ್ಪ ಇವರ ಜಮೀನು ಇರುತ್ತದೆ ಎಂದರೆ ಸರಿ. ಜಮೀನ ಸರ್ವೆ ನಂಬರ 182 ಕ್ಷೇತ್ರ 1 ಎಕರೆ 3 ಗುಂಟೆ ಜಮಿನಿನ ಪೂರ್ವಕ್ಕೆ ಸಿದ್ದಪ್ಪ ಇವರ ಜಮೀನು, ಉತ್ತರಕ್ಕೆ ಮನಸೂರ ಇವರ ಜಮೀನು, ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ಜಮೀನ ಸರ್ವೆ ನಂಬರ 183 ಕ್ಷೇತ್ರ 5 ಗುಂಟೆ ಜಮಿನಿನ ಪೂರ್ವಕ್ಕೆ ಬಸವರಾಜ ಇವರ ಜಮೀನು, ಪಶ್ಚಿಮಕ್ಕೆ ಶಕುಂತಲಮ್ಮ ಇವಳ ಜಮೀನು, ಉತ್ತರಕ್ಕೆ ತಿಪ್ಪಣ್ಣ, ದಕ್ಷಿಣಕ್ಕೆ ಶಕುಂತಲಮ್ಮ ಇವರ ಜಮೀನು ಇರುತ್ತದೆ ಎಂದರೆ ಸರಿ. ಜಮೀನ ಸರ್ವೆ ನಂಬರ 215 ಕ್ಷೇತ್ರ 5 ಗುಂಟೆ ಜಮಿನಿನ ಪೂರ್ವಕ್ಕೆ

ಶಿಪ್ಪಣ್ಣ ಇವರ ಜಮೀನು, ಪಶ್ಚಿಮಕ್ಕೆ ಬಸವರಾಜ ಇವರ ಜಮೀನು, ಉತ್ತರಕ್ಕೆ ಹಣಮಂತ ತಂದೆ ಗುಡ್ಡಪ್ಪ ಇವರ ಜಮೀನು, ದಕ್ಷಿಣಕ್ಕೆ ಆಶಣ್ಣ ಇವರ ಜಮೀನು ಇರುತ್ತದೆ ಎಂದರೆ ಸರಿ. ಜಮೀನ ಸರ್ವೆ ನಂಬರ 216 ಕ್ಷೇತ್ರ 6 ಗುಂಟೆ ಜಮಿನಿನ ಪೂರ್ವಕ್ಕೆ ಬಸವರಾಜ ಇವರ ಜಮೀನು, ಪಶ್ಚಿಮಕ್ಕೆ ಶಕುಂತಲಮ್ಮ ಇವಳ ಜಮೀನು, ಉತ್ತರಕ್ಕೆ ತಿಪ್ಪಣ್ಣ, ದಕ್ಷಿಣಕ್ಕೆ ಶಕುಂತಲಾ ಇವರ ಜಮೀನು ಇರುತ್ತದೆ ಎಂದರೆ ಸರಿ. ದಾವಾ ಮನೆಗಳು ನನ್ನ ಮತ್ತು ವಾದಿಯ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ಸದರಿ ಮನೆಗಳಲ್ಲಿ ಯಾವುದೇ ಪಾಲು ವಾಟನಿಯಾಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನನ್ನು ಮತ್ತು ವಾದಿಗೆ ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು ಇರುವುದಿಲ್ಲ ಎಂದರೆ ಸರಿ. ವಾದಿಗೆ ಪಾಲು ನೀಡಬಾರದು ಎಂಬ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**